

## ಬದುಕಿನ ವಿನ್ಯಾಸ ಬದಲಿಸಿದ ಅರ್ಚನಾ

ಅರ್ಚನಾ ಶ್ರವಣದೋಷವುಳ್ಳ ಯುವತಿ. ಮೈಸೂರಿನಲ್ಲಿ ಮಾತು ಕಲಿತ ಈ ಯುವತಿ ಬೆಂಗಳೂರಿನ 'ಚಿತ್ರಕಲಾ ಪರಿಷತ್'ನಲ್ಲಿ ಗ್ರಾಫಿಕ್ ಡಿಸೈನ್‌ನಲ್ಲಿ ಪದವಿ ಪಡೆದಿದ್ದಾಳೆ. ಈಗ ಬಹುರಾಷ್ಟ್ರೀಯ ಸಾಫ್ಟ್‌ವೇರ್ ಕಂಪನಿಯಲ್ಲಿ ಗ್ರಾಫಿಕ್ ಡಿಸೈನರ್ ಆಗಿ ಕೆಲಸ ಮಾಡುತ್ತಿದ್ದಾಳೆ. ಛಾಯಾಗ್ರಹಣದಲ್ಲಿಯೂ ಆಸಕ್ತಿ ಹೊಂದಿರುವ ಅರ್ಚನಾ ತನಗಿರುವ ತೀವ್ರ ಶ್ರವಣ ದೋಷವನ್ನು ಮೀರಿ ನಿಂತಿದ್ದಾಳೆ. ಅವಳ ಸಾಧನೆಗೆ ಬೆನ್ನಾಗಿ ನಿಂತವರು ಅವರ ತಂದೆ ಮಲ್ಲಿಕಾರ್ಜುನ. ಗ್ರಾಫಿಕ್ಸ್‌ನಲ್ಲಿ ಹೊಸ ಹೊಸ ವಿನ್ಯಾಸವನ್ನು ರೂಪಿಸುತ್ತಾ ಆಕೆ ಬದುಕಿನ ವಿನ್ಯಾಸವನ್ನೇ ಬದಲಿಸಿಕೊಂಡಿದ್ದಾಳೆ.

ಕುಗ್ಗಿರುವುದು ಯಾಕೆ? ಎಂಬ ಪ್ರಶ್ನೆ ಈಗಲೂ ಇದೆ. ಭಾರತೀಯ ಮನಸ್ಸು ಹೇಗಿದೆ ಎಂದರೆ ಮಗುವಿಗೆ ಕಿವಿ ಕೇಳುವುದಿಲ್ಲ, ಮಾತನಾಡಲು ಬರುವುದಿಲ್ಲ ಎಂದರೆ ನಮ್ಮ ಪೋಷಕರು ಮೊದಲು ವೈದ್ಯರ ಬಳಿಗೆ ಹೋಗುವುದಿಲ್ಲ. ಅವರು ಜ್ಯೋತಿಷಿಗಳ ಬಳಿಗೆ ಹೋಗುತ್ತಾರೆ. ಜಾತಕ, ನಕ್ಷತ್ರ ದೋಷ ಎಂದೆಲ್ಲಾ ನಂಬುತ್ತಾರೆ. ಕೊಲ್ಲೂರು ಮೂಕಾಂಬಿಕೆಗೆ ಗಂಟೆ ಒಪ್ಪಿಸಿದರೆ ಮಗುವಿಗೆ ಮಾತು ಬರುತ್ತದೆ ಎಂಬ ಜ್ಯೋತಿಷಿಯ ಮಾತಿನಲ್ಲಿ ಇರುವ ನಂಬಿಕೆ ವೈದ್ಯರ ಮೇಲೆ ಇರುವುದಿಲ್ಲ. ಅದೇ ರೀತಿ ದೃಷ್ಟಿ ದೋಷವಿದ್ದರೂ ಇನ್ನೊಂದು ದೇವರಿಗೆ ಹರಕೆ ಕಟ್ಟಿಕೊಳ್ಳುತ್ತಾರೆ. ಹೋಮ ಹವನ ಎಲ್ಲಾ ಮಾಡಿಸುತ್ತಾರೆ. ಜಪತಪ ನಡೆಯುತ್ತದೆ. ಅವೆಲ್ಲವೂ ವಿಫಲವಾದ ನಂತರವೇ ಅವರು ವೈದ್ಯರ ಬಳಿಗೆ ಬರುವುದು. ಆದರೆ ಅಷ್ಟರಲ್ಲಾಗಲೇ ತಡವಾಗಿರುತ್ತದೆ. ತಾವೂ ಸಂಕಷ್ಟಕ್ಕೆ ಸಿಲುಕುತ್ತಾರೆ. ಜೊತೆಗೆ ಮಕ್ಕಳನ್ನೂ ಸಂಕಷ್ಟಕ್ಕೆ ಸಿಲುಕಿಸುತ್ತಾರೆ. ಸಮಾಜ ಕೂಡ ಅಂಗವಿಕಲರನ್ನು ಮಾನವೀಯ ದೃಷ್ಟಿಯಲ್ಲಿ



## ಸಾಧನೆ ಮೆಟ್ಟಿಲು ಹತ್ತಿದ ಅಣ್ಣ ತಂಗಿ

ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕಿನ ಅರುಣಾಚಲ ಶರ್ಮಾ ಮತ್ತು ಲತಾ ದಂಪತಿಗೆ ಇಬ್ಬರು ಮಕ್ಕಳು. ಮೊದಲನೆಯವ ಗೌತಮ ಶರ್ಮಾ, ಎರಡನೆಯವಳು ಚಂದನ ಶರ್ಮಾ. ಇಬ್ಬರೂ ಹುಟ್ಟಿನಿಂದಲೇ ಶ್ರವಣ ದೋಷಕ್ಕೆ ಒಳಗಾದವರು. ಅರುಣಾಚಲ ಶರ್ಮಾ ಬ್ಯಾಂಕ್ ಉದ್ಯೋಗಿ. ಲತಾ ಗೃಹಿಣಿ. ಇಬ್ಬರು ಮಕ್ಕಳನ್ನೂ ಅವರು ಗೆಲ್ಲಿಸಿದ್ದಾರೆ. ಪತಿ ಉದ್ಯೋಗಕ್ಕಾಗಿ ಬೇರೆ ಬೇರೆ ಕಡೆ ಇದ್ದರೂ ಲತಾ ಮೈಸೂರಿನಲ್ಲಿಯೇ ಉಳಿದು ಮಕ್ಕಳಿಗೆ ಮಾತು ಕಲಿಸಿದ್ದಾರೆ. ಚಂದನಳನ್ನು ಕಂಕುಳಲ್ಲಿ ಹೊತ್ತು ಗೌತಮನಿಗೆ ಮಾತು ಕಲಿಸಿದ ಲತಾ ನಂತರ ಚಂದನಾಳಿಗೂ ಮಾತು ಕಲಿಸಿದರು. ಇಬ್ಬರು ಮಕ್ಕಳೂ ನಿರೀಕ್ಷೆ ಹುಸಿ ಮಾಡಲಿಲ್ಲ.

ಗೌತಮ ಸಾಮಾನ್ಯ ಶಾಲೆಯಲ್ಲಿಯೇ ಓದಿ 10ನೇ ತರಗತಿಯಲ್ಲಿ ಶೇ 88ರಷ್ಟು ಅಂಕ ಮತ್ತು ಪಿಯುಸಿಯಲ್ಲಿ ಶೇ 80 ಅಂಕ ಪಡೆದು ಮೈಸೂರಿನ ಎಸ್‌ಜೆ.ಸಿ.ಇ.ಯಲ್ಲಿ ಬಿ.ಇ. ಪದವಿ ಪಡೆದರು. ನಂತರ ಬಿಇಎಲ್ ಸಂಸ್ಥೆಯಲ್ಲಿ ಎಂಜಿನಿಯರ್ ಆಗಿ ಸೇರಿಕೊಂಡರು. ಅತ್ಯುತ್ತಮ ಕೆಲಸ ಮಾಡಿ ಈಗ ಬಡ್ತಿ ಹೊಂದಿ ಹಿರಿಯ ಎಂಜಿನಿಯರ್ ಆಗಿದ್ದಾರೆ. ಕ್ರಿಕೆಟ್ ಮತ್ತು ವಾಲಿಬಾಲ್ ಆಟದಲ್ಲಿ ಆಸಕ್ತಿ ಹೊಂದಿರುವ ಗೌತಮ್ ಚಿತ್ರಕಲೆಯಲ್ಲಿಯೂ ಕೈಯಾಡಿಸಿದ್ದಾರೆ.

ಗೌತಮ್ ಸಹೋದರಿ ಚಂದನಾ ಶರ್ಮಾ ವಿಪ್ರೊದಲ್ಲಿ ಉದ್ಯೋಗಿ. ಮೈಸೂರು ಜೆಎಸ್‌ಎಸ್ ಮಹಿಳಾ ಕಾಲೇಜಿನಿಂದ ಬಿಎ ಪದವಿ ಪಡೆದಿರುವ ಚಂದನಾ ಶಾಲಾ ದಿನಗಳಲ್ಲಿ ಆಧುನಿಕ ನೃತ್ಯ ಕಲಿತವರು. ಟೀವಿಯಲ್ಲಿ ಬರುತ್ತಿದ್ದ ನೃತ್ಯ ಕಾರ್ಯಕ್ರಮಕ್ಕೆ ಮಾರುಹೋದ ಚಂದನಾ, ಮೈಸೂರಿನ ಚಾಮರಾಜ್ ಬಳಿ ಆಧುನಿಕ ನೃತ್ಯ ಕಲಿತರು. ಹಲವಾರು ನೃತ್ಯ ಪ್ರದರ್ಶನ ನೀಡಿದ್ದಾರೆ.